ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–01

ಸಂಖ್ಯೆ.ಸಿ2(3)ದೂರು/58/2013–14 ದಿನಾಂಕ: 07–12–2015

: ಜ್ಞಾಪನಾ :

ವಿಷಯ: ಶ್ರೀ ರಾಜೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿಗಳು(ಅಮಾನತ್ತಿನಲ್ಲಿರುವವರು), ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ದೂರಿನ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಪತ್ರ ಸಮಸಂಖ್ಯೆ, ದಿನಾಂಕ 23–11–2015.
2) ಸಹನಿರ್ದೇಶಕರು–1, ಬೆಂಗಳೂರು ವಿಭಾಗ, ಬೆಂಗಳೂರು ಇವರ ಪತ್ರ ಸಂಖ್ಯೆ.ಸನಿ–1/ ಆಶಾ/ದೂರು ವಿಚಾರಣೆ–01/2015–16, ದಿನಾಂಕ 05–12–2015.
3) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ತಾಲ್ಲೂಕು ಇವರ ಜ್ಞಾಪನಾ ಸಂಖ್ಯೆ.ಎ4.ಸಾ.ಶಿ.ಇ./ಶಿ.ಮು.ಬಾ.ಬ/01/2015–16, ದಿ.07–09–2015.

ಪ್ರಸ್ತಾವನೆ:

1) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಿಕ್ಕಮಗಳೂರು ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಸದರಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ರಾಜೇಗೌಡ (ದಿನಾಂಕ 10–09–2015 ರಿಂದ ಅಮಾನತ್ತಿನಲ್ಲಿರುವವರು) ಇವರ ವಿರುದ್ಧ ದಿನಾಂಕ 24–09–2015 ರಲ್ಲಿ ಸಲ್ಲಿಸಿದ್ದ ದೂರಿನ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ವರದಿ ನೀಡುವಂತೆ ಸಹನಿರ್ದೇಶಕರು–1, ಬೆಂಗಳೂರು ವಿಭಾಗ, ಬೆಂಗಳೂರು ಇವರಿಗೆ ಉಲ್ಲೇಖ(1) ರಲ್ಲಿ ಸೂಚಿಸಲಾಗಿತ್ತು.
2) ಅದರಂತೆ, ಶ್ರೀ ರಾಜೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿಗಳು (ದಿನಾಂಕ 10–09–2015 ರಿಂದ ಅಮಾನತ್ತಿನಲ್ಲಿರುವವರು), ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ ಇವರು ಚಿಕ್ಕಮಗಳೂರು ತಾಲ್ಲೂಕಿನ ಒಟ್ಟು 38 ಮಂದಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಂದು ದಿನ ಅಂದರೆ ದಿನಾಂಕ 05–09–2015 ರಂದು ಇವರ ವಿರುದ್ಧ ಮುಷ್ಕರದಲ್ಲಿ ಭಾಗವಹಿಸಿದ್ದ ಕಾರಣ ಕೆ.ಸಿ.ಎಸ್.ಆರ್. ನಿಯಮ 106 'ಬಿ' ರಂತೆ ಕ್ರಮ ಕೈಗೊಂಡು ಅವರುಗಳ ಸೇವಾ ಪುಸ್ತಕದಲ್ಲಿ ದಾಖಲಿಸಿ ಅವರ ಹಕ್ಕಿನಲ್ಲಿರುವ ಎಲ್ಲಾ ರಜೆಗಳನ್ನೂ ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ಸಹನಿರ್ದೇಶಕರು–1, ಬೆಂಗಳೂರು ವಿಭಾಗ, ಬೆಂಗಳೂರು ಇವರು ಪರಿಶೀಲಿಸಿ ಉಲ್ಲೇಖ(2) ರಲ್ಲಿ ವಿವರವಾದ ವರದಿ ಸಲ್ಲಿಸಿರುತ್ತಾರೆ.
3) ಸದರಿ ವರದಿಯನ್ವಯ, ಶ್ರೀ ರಾಜೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿಗಳು(ದಿನಾಂಕ 10–09–2015 ರಿಂದ ಅಮಾನತ್ತಿನಲ್ಲಿರುವವರು), ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ ಇವರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ನಿಯಮ–32 ರಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹಾ ಮೇಲಧಿಕಾರಿಗಳ ಅನುಮತಿ ಪಡೆಯದೇ ಏಕಾಏಕಿ ಕೆ.ಸಿ.ಎಸ್.ಆರ್. ನಿಯಮ 106 'ಬಿ' ರಂತೆ ಕಠಿಣ ದಂಡನೆ ವಿಧಿಸಿ, ಕರ್ತವ್ಯಲೋಪವೆಸಗಿರುತ್ತಾರೆ ಎಂದು ಸಹನಿರ್ದೇಶಕರು–1, ಬೆಂಗಳೂರು ವಿಭಾಗ, ಇವರು ಅಭಿಪ್ರಾಯ ನೀಡಿರುತ್ತಾರೆ.

ಆದೇಶ:

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಎಲ್ಲಾ 38 ಮಂದಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೂ ಉಲ್ಲೇಖ(3) ರಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ ಇವರು ವಿಧಿಸಲಾಗಿರುವ 106 'ಬಿ' ದಂಡನೆಯು ನಿಯಮಬಾಹಿರ ಹಾಗೂ ಅಸಿಂಧುವಾಗಿದ್ದು, ಸದರಿ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಈ ಮೂಲಕ ಆದೇಶಿಸಿದೆ. ಈ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು ಕೂಡಲೇ ಕ್ರಮ ಕೈಗೊಂಡು ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

16/12/15

(ಕೆ.ಎಸ್. ಸತ್ಯಮೂರ್ತಿ)
ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು

ಇವರಿಗೆ:

(1) ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ – ಸೂಕ್ತ ಕ್ರಮಕ್ಕಾಗಿ
(2) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ತಾಲ್ಲೂಕು– ಸೂಕ್ತ ಕ್ರಮಕ್ಕಾಗಿ